ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 18-03-1971.

***ವಿಜಯಿಯಾಗಲು ಸಂಗ್ರಹ ಮತ್ತು ಸಂಗ್ರಾಮ ಶಕ್ತಿಯ ಅವಶ್ಯಕತೆ***

(विजयी बनने के लिए संग्रह और संग्राम की शक्ति आवश्यक)

ಇಂದು ವಿಶೇಷವಾಗಿ ಭಟ್ಟಿಯಲ್ಲಿ ಇರುವವರಿಗಾಗಿ ಕರೆಯಲಾಗಿದೆ. ಭಟ್ಟಿಯವರು ಏನೇನು ಧಾರಣೆ ಮಾಡಿರುವಿರಿ? ಅದನ್ನು ನೋಡುತ್ತಿದ್ದೇವೆ. ಇಂದು ವಿಶೇಷವಾಗಿ ಎರಡು ಮಾತಿನ ಧಾರಣೆಯನ್ನು ಪ್ರತಿಯೊಬ್ಬರ ಈ ಸಾಕಾರ ಚಿತ್ರದ ಮೂಲಕ ನೋಡುತ್ತಿದ್ದೇವೆ. ಎರಡು ಶಕ್ತಿಗಳ ಧಾರಣೆಯನ್ನು ಎಲ್ಲಿಯವರೆಗೆ ಪ್ರತಿಯೊಬ್ಬರು ಯಥಾಶಕ್ತಿ ಧಾರಣೆ ಮಾಡಿದ್ದಾರೆ ಎಂದು ನೋಡುತ್ತಿದ್ದೇವೆ. ಆ ಎರಡು ಶಕ್ತಿಗಳು ಯಾವುದು? ಒಂದಾಗಿದೆ ಸಂಗ್ರಹ ಮಾಡುವ ಶಕ್ತಿ ಮತ್ತು ಇನ್ನೊಂದು ಸಂಗ್ರಾಮ ಮಾಡುವ ಶಕ್ತಿ. ಸಂಗ್ರಹ ಮಾಡುವ ಶಕ್ತಿಯೂ ಸಹ ಅತ್ಯಂತ ಅವಶ್ಯವಾಗಿದೆ. ಆದ್ದರಿಂದ ಭಟ್ಟಿಯಲ್ಲಿ ಯಾವ ಜ್ಞಾನ ರತ್ನಗಳ ಧಾರಣೆ ಸಿಕ್ಕಿದೆ? ಅದನ್ನು ಬುದ್ಧಿಯಲ್ಲಿ ಸಂಗ್ರಹ ಮಾಡಬೇಕು ಮತ್ತು ಈ ಸಂಗ್ರಹದಿಂದಲೇ ಲೋಕಸಂಗ್ರಾಮ ಮಾಡಲು ಸಾಧ್ಯ. ಆದ್ದರಿಂದ ಸಂಗ್ರಹ ಮಾಡುವ ಮತ್ತು ಸಂಗ್ರಾಮ ಮಾಡುವ ಶಕ್ತಿ ಎರಡೂ ಅವಶ್ಯಕವಾಗಿದೆ. ಎರಡೂ ಶಕ್ತಿಗಳನ್ನು ಧಾರಣೆ ಮಾಡಿದ್ದೀರಿ. ಎರಡರಲ್ಲಿ ಯಾವುದಾದರೂ ಕಡಿಮೆ ಇದ್ದರೆ ಕಡಿಮೆ ಇರುವವರು ಸದಾ ವಿಜಯಿ ಆಗಲು ಸಾಧ್ಯವಿಲ್ಲ. ಯಾರಲ್ಲಿ ಎಷ್ಟು ಸಂಗ್ರಹ ಮಾಡುವ ಶಕ್ತಿ ಇರುತ್ತದೆಯೋ ಅಷ್ಟು ಸಂಗ್ರಾಮ ಮಾಡುವ ಶಕ್ತಿಯೂ ಇರುತ್ತದೆ. ಎರಡೂ ಶಕ್ತಿಗಳನ್ನು ಧಾರಣೆ ಮಾಡಲು ಭಟ್ಟಿಗೆ ಬಂದಿರುವಿರಿ. ಹಾಗಾದರೆ ಶಕ್ತಿ ಸ್ವರೂಪ ಆಗಿರುವಿರಾ?ಭಟ್ಟಿಯಿಂದ ಯಾವ ವರದಾನ ಪ್ರಾಪ್ತಿ ಮಾಡಿಕೊಂಡಿರುವಿರಿ? ಭಕ್ತಿಮಾರ್ಗದಲ್ಲಿ ವರದಾನ ಕೊಡುತ್ತಾರಲ್ಲವೆ ಪುತ್ರವಾನ್ ಭವ! ಧನವಾನ್ ಭವ!. ಆದರೆ ಈ ಭಟ್ಟಿಯಿಂದ ಯಾವ ವರದಾನ ಸಿಕ್ಕಿದೆ? ಶಿಕ್ಷಕರಾಗಿದ್ದೀರೊ ಅಥವಾ ಮಾಸ್ಟರ್ ವರದಾತಾ ಸಹ ಆಗಿರುವಿರೊ? ಒಂದು ವರದಾನ ಸಿಕ್ಕಿದೆ ಶಕ್ತಿವಾನ್ ಭವ! ಎರಡನೆಯದು ಸದಾ ಅವ್ಯಕ್ತ ಏಕರಸ ಸ್ಥಿತಿ ಭವ! ಎಂದರೆ ಸದಾ ಅವ್ಯಕ್ತ ಏಕರಸ ಅವಸ್ಥೆಯಲ್ಲಿರುವ ವರದಾನ ಸಿಕ್ಕಿದೆ. ಈ ಎರಡು ವರದಾನಗಳಲ್ಲಿ ಎರಡೂ ಮಾತುಗಳು ಸಮಾವೇಶವಾಗಿವೆ. ಈ ಎರಡೂ ವರದಾನಗಳನ್ನು ಪ್ರಾಪ್ತಿ ಮಾಡಿಕೊಂಡು ಸಂಪತ್ತಿವಂತರಾಗಿ ನಿಮ್ಮ ಪ್ರ್ಯಾಕ್ಟಿಕಲ್ ಪ್ರಮಾಣ ತೋರಿಸಲು ಹೋಗಬೇಕಾಗಿದೆ. ಮನೆಗೆ ಹೋಗುತ್ತಿದ್ದೇವೆ ಅಥವಾ ತಮ್ಮ ಸ್ಥಾನಕ್ಕೆ ಹೋಗುತ್ತಿದ್ದೇವೆ ಎಂದು ತಿಳಿಯಬಾರದು. ಆದರೆ ಯಾವ ಶಕ್ತಿಗಳನ್ನು ಮತ್ತು ವರದಾನಗಳನ್ನು ಪಡೆದುಕೊಂಡಿದ್ದೀರೋ ಅದನ್ನು ಪ್ರ್ಯಾಕ್ಟಿಕಲ್ ಮಾಡಲು ವಿಶ್ವದ ಸ್ಟೇಜ್ ಮೇಲೆ ಹೋಗುತ್ತಿದ್ದೇವೆ. ಎಂದು ತಿಳಿದುಕೊಳ್ಳಬೇಕು. ಸ್ಟೇಜ್ ಮೇಲೆ ಇರುವ ನಟನಿಗೆ ಯಾವ ಮುಖ ಮಾತಿನ ಕಡೆ ಗಮನ ಇರುತ್ತದೆ? ಎಚ್ಚರಿಕೆ ಮತ್ತು ನಿಶ್ಚಿತತೆ ( ಅಟೆನ್ಶನ್ ಮತ್ತು ಅಕ್ಯೂರೆಸಿ). ಇವೆರಡು ಮಾತುಗಳನ್ನು ನೆನಪಿಡಬೇಕು. ಪ್ರತಿ ಸೆಕೆಂಡ್, ಪ್ರತಿ ಸಂಕಲ್ಪದಲ್ಲಿ ಎಚ್ಚರಿಕೆ ಮತ್ತು ಅಕ್ಯುರೆಸಿ (ನಿಶ್ಚಿತತೆ), ಇಲ್ಲದಿದ್ದರೆ ಬಾಪ್ ದಾದಾರನ್ನು ಪ್ರತ್ಯಕ್ಷ ಮಾಡುವ ಶ್ರೇಷ್ಠ ಪಾತ್ರವನ್ನು ಅಭಿನಯಿಸಲು ಸಾಧ್ಯವಾಗುವುದಿಲ್ಲ. ಹಾಗಾದರೆ ಈಗ ತಿಳಿಯಿತೆ ಏನು ಮಾಡಬೇಕೆನ್ನುವುದು? ಬಾಪ್ ದಾದಾ ಅವರನ್ನು ಪ್ರತ್ಯಕ್ಷ ಮಾಡುವ ಪಾತ್ರ ಅಭಿನಯಿಸಲು ಹೋಗುತ್ತಿರುವಿರಿ. ಈ ಲಕ್ಷ್ಯವನ್ನಿಟ್ಟುಕೊಂಡು ಹೋಗಬೇಕು. ಯಾವುದೇ ಕರ್ಮ ಮಾಡಿದರೂ ಮೊದಲು ಈ ಕರ್ಮದಿಂದ ಬಾಪ್ ದಾದಾ ಅವರ ಪ್ರತ್ಯಕ್ಷತೆ ಆಗುತ್ತದೆಯೆ ಎಂದು ನೋಡಿ. ಕೇವಲ ವಾಣಿಯಿಂದ ಪ್ರತ್ಯಕ್ಷ ಮಾಡಬೇಕೆಂದಲ್ಲ. ಆದರೆ ಪ್ರತಿ ಸಮಯದ, ಪ್ರತಿ ಕರ್ಮದ ಮೂಲಕ ಪ್ರತ್ಯಕ್ಷ ಮಾಡಬೇಕು. ಸರ್ವಾತ್ಮರಿಂದ ಇವರು ಒಬ್ಬೊಬ್ಬರೂ ಸಾಕ್ಷಾತ್ ತಂದೆಯ ಸಮಾನ ಇದ್ದಾರೆ ಎನ್ನುವ ಮಾತು ಬರಬೇಕು. ಆ ರೀತಿ ಪ್ರತ್ಯಕ್ಷ ಮಾಡಬೇಕು. ನಿಮ್ಮ ಪ್ರತಿ ಕರ್ಮ ದರ್ಪಣವಾಗಬೇಕು. ಆ ದರ್ಪಣದಿಂದ ಬಾಪ್ ದಾದಾ ಅವರ ಗುಣಗಳ ಮತ್ತು ಕರ್ತವ್ಯಗಳ ದಿವ್ಯ ರೂಪ ಮತ್ತು ಆತ್ಮೀಯತೆಯ ಸಾಕ್ಷಾತ್ಕಾರ ಆಗಬೇಕು. ಆದರೆ ದರ್ಪಣ ಆಗಲು ಯಾರಿಗೆ ಸಾಧ್ಯ? ಯಾರು ಕೇವಲ ಸಂಕಲ್ಪಗಳನ್ನಷ್ಟೇ ಅಲ್ಲದೇ ದೇಹಾಭಿಮಾನವನ್ನೂ ಅರ್ಪಣೆ ಮಾಡುವವರೋ ಅವರೇ ಆಗಬಲ್ಲರು. ಯಾರು ದೇಹಾಭಿಮಾನವನ್ನು ಅರ್ಪಣೆ ಮಾಡುತ್ತಾರೆಯೋ ಅವರ ಪ್ರತಿ ಕರ್ಮ ದರ್ಪಣವಾಗುತ್ತದೆ. ಯಾವ ರೀತಿ ಯಾವುದಾದರೂ ವಸ್ತುವನ್ನು ಅರ್ಪಣೆ ಮಾಡಿದಾಗ

ಅರ್ಪಣೆ ಮಾಡಿದ ವಸ್ತುವನ್ನು ಪುನಃ ನಮ್ಮದೆಂದು ತಿಳಿದುಕೊಳ್ಳುವುದಿಲ್ಲವೋ ಅದೇ ರೀತಿ ಈ ದೇಹದ ಪರಿವೆಯನ್ನೂ ಸಹ ಅರ್ಪಣೆ ಮಾಡುವುದರಿಂದ ನನ್ನತನ ಅಳಿದುಹೋಗುತ್ತದೆ. ಆಗ ಸೆಳೆತವೂ ಅಳಿಸಿಹೋಗುತ್ತದೆ. ಈ ರೀತಿ ಸಮರ್ಪಣೆ ಆಗಿರುವಿರಾ? ಈ ರೀತಿ ಸಮರ್ಪಣೆ ಆಗುವವರ ಚಿಹ್ನೆ ಏನು? ಒಂದು ಅವರು ಸದಾ ಯೋಗಯುಕ್ತ ಮತ್ತು ಎರಡನೇಯದು ಸದಾ ಬಂಧನಮುಕ್ತ. ಆದ್ದರಿಂದ ಸಮರ್ಪಣೆ ಅರ್ಥಾತ್ ಸದಾ ಯೋಗಯುಕ್ತ ಮತ್ತು ಸದಾ ಸರ್ವಬಂಧನ ಮುಕ್ತ ಈ ನಿಮ್ಮ ಚಿಹ್ನೆಯನ್ನು ಸದಾ ಕಾಯಂ ಆಗಿಟ್ಟುಕೊಳ್ಳಿ. ಯಾವುದಾದರೂ ಬಂಧನ ಇದ್ದರೆ ಯೋಗಯುಕ್ತ ಎಂದು ಹೇಳಿಸಿಕೊಳ್ಳುವುದಿಲ್ಲ. ಯೋಗ ಯುಕ್ತ ಆದವರ ಗುರುತು ಇದೂ ಸಹ ಆಗಿರುತ್ತದೆ - ಅವರ ಪ್ರತಿ ಸಂಕಲ್ಪ, ಪ್ರತಿ ಕರ್ಮ ಯೋಗಯುಕ್ತ ಆಗಿರುತ್ತದೆ ಏಕೆಂದರೆ ಯಾವ ಯಾವ ಯುಕ್ತಿಗಳು ಅವರಿಗೆ ಸಿಕ್ಕಿವೆಯೋ ಆ ಯುಕ್ತಿಗಳನ್ನು ಧಾರಣೆ ಮಾಡಿರುವ ಕಾರಣ ಯುಕ್ತಿಯುಕ್ತ ಮತ್ತು ಯೋಗ ಯುಕ್ತ ಆಗಿರುತ್ತಾರೆ. ಗುರುತಿಸುವ ಚಿಹ್ನೆ ತಿಳಿಯಿತೆ. ಇದರಿಂದ ಎಲ್ಲಿಯವರೆಗೆ ತಲುಪಿದ್ದೇನೆ ಎಂದು ನಿಮ್ಮನ್ನು ನೀವು ತಿಳಿದುಕೊಳ್ಳಲು ಸಾಧ್ಯ ಆದ್ದರಿಂದ ಸಂಗ್ರಹ ಮತ್ತು ಸಂಗ್ರಾಮದ ಶಕ್ತಿಯನ್ನು ನಿಮ್ಮಲ್ಲಿ ತುಂಬಿಕೊಂಡು ಹೋಗಬೇಕು ಎಂದು ಹೇಳಿದೆ. ಪರಿಣಾಮ ಏನು ನೋಡಿದಿರಿ? ಸರ್ಟಿಫಿಕೇಟ್ ಸಿಕ್ಕಿತೆ? ಒಂದು ನಿಮ್ಮಿಂದ ನೀವು ತೃಪ್ತ ಆಗಿರುವ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು, ಎರಡನೇಯದು ಸರ್ವರನ್ನು ತೃಪ್ತ (ಸಂತುಷ್ಟ) ಮಾಡಿರುವ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು, ಮೂರನೇಯದು ಸಂಪೂರ್ಣ ಸಮರ್ಪಣೆ ಆಗಿರುವುದರದು.

ಸಮರ್ಪಣೆ ಅಂದರೆ ಆಬುಗೆ ಬಂದು ಕುಳಿತುಕೊಳ್ಳುವುದು ಎಂದಲ್ಲ. ಸಮರ್ಪಣೆ ಆಗಿರುವದರ ಸರ್ಟಿಫಿಕೇಟ್ ಸಹ ಪಡೆಯಬೇಕು. ನಾಲ್ಕನೇಯದು ಯಾವ ಜ್ಞಾನದ ಯುಕ್ತಿಗಳು ಸಿಕ್ಕಿವೆಯೋ ಅವುಗಳನ್ನು ಸಂಗ್ರಹ ಮಾಡಿರುವುದರ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು. ಈ ನಾಲ್ಕು ಸರ್ಟಿಫಿಕೇಟ್ ನಿಮ್ಮ ಟೀಚರ್ ನಿಂದ ತೆಗೆದುಕೊಂಡು ಹೋಗಬೇಕು. ಕೆಲವು ಮಾತುಗಳಲ್ಲಿ ಈ ಗುಂಪಿಗೆ 100 ಅಂಕಗಳೂ ಸಹ ಇವೆ. ಅದು ಯಾವ ಮಾತು? ಪುರುಷಾರ್ಥದ ಮುಗ್ಧತೆಯಲ್ಲಿ 100 ಅಂಕಗಳಿವೆ ಮತ್ತು ಇನ್ನೊಂದು ವಿಶೇಷ ಗುಣವೂ ಇದೆ. ಅದೇನೆಂದರೆ ಎಲ್ಲರಲ್ಲಿಯೂ ತಮ್ಮನ್ನು ತಾವು ಪರಿವರ್ತನೆ ಮಾಡಿಕೊಳ್ಳುವ ತೀವ್ರ ಇಚ್ಛೆ ಇದೆ. ಆದ್ದರಿಂದ ಬಾಪ್‌ದಾದಾ ಈ ಗುಂಪನ್ನು ಭರವಸೆಯ ಗುಂಪು ಎಂದು ತಿಳಿಯುತ್ತಾರೆ. ಆದರೆ ಸದಾ ನಮ್ರಚಿತ್ತರಾಗಿದ್ದಾಗ ಎಲ್ಲಾ ಭರವಸೆಗಳನ್ನು ಈಡೇರಿಸಲು ಸಾಧ್ಯ. ಭರವಸೆಯ ವಿಶೇಷತೆ ಇದೆ ಆದರೆ ಯಾವ ವಿಶೇಷತೆಗಳು ಸಿಕ್ಕಿವೆಯೋ ಆ ವಿಶೇಷತೆಗಳನ್ನು ಧಾರಣೆ ಮಾಡಿದಾಗ ಪ್ರತ್ಯಕ್ಷ ಪ್ರಮಾಣವನ್ನು ತೋರಿಸಲು ಸಾಧ್ಯ. ತಿಳಿಯಿತೆ.

ಜ್ಞಾನ ಸಂಗೀತ ಕೇಳುವುದರಲ್ಲಿ ಮತ್ತು ರಹಸ್ಯ ಕೇಳುವುದು ಇಷ್ಟವಾಗುತ್ತದೆ ಆದರೆ ಈಗ ಏನು ಮಾಡಬೇಕು? ರಹಸ್ಯಯುಕ್ತ ಆಗಬೇಕು. ಯೋಗ ಒಳ್ಳೆಯದು ಆದರೆ ಯೋಗಯುಕ್ತ ಆಗಬೇಕು. ಬಂಧನಮುಕ್ತ ಆಗುವ ಇಚ್ಛೆ ಇದೆ ಆದರೆ ಮೊದಲು ದೇಹಾಭಿಮಾನದ ಬಂಧನ ಬಿಡಬೇಕು. ಆಗ ಸರ್ವ ಬಂಧನಮುಕ್ತ ಸ್ವತಃ ಆಗುತ್ತೀರಿ. ತಿಳಿಯಿತೆ. ಈಗ ಇದೇ ಪ್ರಯತ್ನ ಮಾಡಬೇಕು. ಉದಾಹರಣಾ ಮೂರ್ತಿ ಮತ್ತು ಸುಪುತ್ರರಾಗಬೇಕು. ಶಕ್ತಿವಂತರು ಮತ್ತು ಸಂಪತ್ತುಳ್ಳವರು ಆಗಿರುವಿರಾ? ಪ್ರತಿಯೊಬ್ಬರು ತಮ್ಮೊಂದಿಗೆ ತಾವು ಪ್ರತಿಜ್ಞೆಯನ್ನು ಸಹ ಮಾಡಿರುವಿರಿ. ಯಾವ ಪ್ರತಿಜ್ಞೆಯನ್ನು ಮಾಡಿದ್ದೀರೋ ಅದನ್ನು ಪೂರ್ಣ ಮಾಡಲು ಶಕ್ತಿಯನ್ನೂ ಸಹ ಒಟ್ಟುಗೂಡಿಸಬೇಕು. ಎಷ್ಟೇ ಸಹನೆ ಮಾಡಬೇಕಾಗಿ ಬರಬಹುದು, ಎದುರಿಸಬೇಕಾಗಿ ಬರಬಹುದು ಆದರೆ ಪ್ರತಿಜ್ಞೆಯನ್ನು ಪೂರ್ಣ ಮಾಡಬೇಕು. ಇಂತಹ ಪ್ರತಿಜ್ಞೆ ಮಾಡಿರುವಿರಾ? ಇಡೀ ವಿಶ್ವದ ಆತ್ಮರೆಲ್ಲರೂ ಪ್ರತಿಜ್ಞೆಯಿಂದ ನಿಮ್ಮನ್ನು ದೂರ ಮಾಡಲು ಪ್ರಯತ್ನ ಮಾಡಿದರೂ ಪ್ರತಿಜ್ಞೆಯಿಂದ ದೂರ ಆಗುವುದಿಲ್ಲ. ಆದರೆ ಎದುರಿಸಿ ಸಂಪೂರ್ಣ ಆಗಿಯೇ ತೋರಿಸುತ್ತೇವೆ. ಇಂತಹ ಪ್ರತಿಜ್ಞೆ ಮಾಡುವವರ ಸ್ಮೃತಿಚಿಹ್ನೆಯೇ ಅಚಲಘರ್ ಆಗಿದೆ. ನಮ್ಮ ಸ್ಮೃತಿಚಿಹ್ನೆ ಹೇಗಿದೆ ಅದೇ ರೀತಿ ನಾವಾಗಬೇಕೆಂದು ಸದಾ ನೆನಪಿರಬೇಕು. ಇದು ಸಹಜವಾಗಿದೆ ಅಲ್ಲವೆ? ಸ್ಥೂಲ ಚಿಹ್ನೆ ನೆನಪಿಡುವುದರಿಂದ ನಶೆ ಮತ್ತು ಗುರಿ ನೆನಪಿರುತ್ತದೆ. ಇಡೀ ವಿಶ್ವದಿಂದ ಆರಿಸಲ್ಪಟ್ಟಂತಹ ನಾವು ವಿಶೇಷ ಆತ್ಮರಾಗಿದ್ದೇವೆ ಎಂದು ಅವಶ್ಯ ತಿಳಿಯಬೇಕು. ಎಷ್ಟು ವಿಶೇಷ ಆತ್ಮರೋ ಅಷ್ಟು ಅವರ ಪ್ರತಿಯೊಂದು ಕರ್ಮದಲ್ಲಿ ವಿಶೇಷತೆ ಇರುತ್ತದೆ. ವಿಶೇಷ ಆತ್ಮರಾಗಿರುವಿರಿ ಅಲ್ಲವೆ. ಕಡಿಮೆ ಇಲ್ಲ. ಎಲ್ಲಾ ಮಧುಬನ ನಿವಾಸಿಗಳು ತಮ್ಮನ್ನು ಪ್ರಾಕ್ಟಿಕಲ್ ವಿಶೇಷ ಆತ್ಮರೆಂದು ತೋರಿಸಿಕೊಟ್ಟು ನಿಮ್ಮ ಈ ಗುಂಪಿನ ಹೆಸರು ಪ್ರಸಿದ್ಧ ಮಾಡಬೇಕು. ಹೇಳುವುದು ಕಡಿಮೆ ಆದರೆ ಮಾಡಿಯೇ

ತೋರಿಸುತ್ತೇವೆ ಎನ್ನುವ ಲಕ್ಷ್ಯವನ್ನು ಇಟ್ಟುಕೊಳ್ಳಬೇಕು. ನಿಮ್ಮ ಈ ಗುಂಪಿನ ಈ ವಿಶೇಷತೆಯನ್ನು ನೋಡುತ್ತೇವೆ. ಸ್ಟೇಜ್ ನ ಮೇಲೆ ಹೋಗಿ ಎಂತಹ ಪಾತ್ರ ಮಾಡಬೇಕೆಂದರೆ ನೋಡಿದವರು ಒನ್ಸ್ ಮೋರ್ ಎನ್ನಬೇಕು. ತಿಳಿಯಿತೆ. ನಿಮ್ಮ ನಿಮಿತ್ತ ಟೀಚರ್ ನಿಮ್ಮ ಗುಂಪಿಗೆ ಬಾರಿ ಬಾರಿಗೂ ನಿಮಂತ್ರಣ ಕೊಡುತ್ತಿರಬೇಕು. ಅನ್ಯ ಗುಂಪುಗಳಿಗೆ ಒಂದು ಉದಾಹರಣೆಯಾಗಿ ತೋರಿಸಬೇಕು. ಯಾರಾದರೂ ಒಳ್ಳೆಯ ಕರ್ಮ ಮಾಡಿದರೆ ಅವರ ನೆನಪು ಮೇಲಿಂದ ಮೇಲೆ ಬರುತ್ತದೆ. ಆದ್ದರಿಂದ ಈ ಗುಂಪು ಇಂತಹ ಕಮಾಲ್ ಮಾಡಿ ತೋರಿಸಬೇಕು. ಒಳ್ಳೆಯದು.

ಅವ್ಯಕ್ತ ಮುರಳಿ 18-01-1971.

***ವಿಜಯಿಯಾಗಲು ಸಂಗ್ರಹ ಮತ್ತು ಸಂಗ್ರಾಮ ಶಕ್ತಿಯ ಅವಶ್ಯಕತೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಮಾಸ್ಟರ್ ಸರ್ವಶಕ್ತಿವಂತನು, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯಿಂದ ಲಭಿಸಿರುವ ಜ್ಞಾನ ರತ್ನಗಳನ್ನು ಬುದ್ಧಿಯಲ್ಲಿ ಸಂಗ್ರಹಿಸಿಕೊಂಡಿರುವ ಸಂಗ್ರಹ ಶಕ್ತಿ ಸ್ವರೂಪ.

2. ನಾನು ಸಂಗ್ರಹಿಸಿಕೊಂಡಿರುವ ಜ್ಞಾನ ರತ್ನಗಳನ್ನು ಲೋಕ ಸಂಗ್ರಾಮ ಮಾಡಲು ಉಪಯೋಗಿಸುವ ಸಂಗ್ರಾಮ ಶಕ್ತಿ ಸ್ವರೂಪ.

3. ನಾನು ಮಾಸ್ಟರ್ ಶಿಕ್ಷಕನು ಮತ್ತು ಮಾಸ್ಟರ್ ವರದಾತನು.

4. ನಾನು ಸದ್ಗುರುವಿನಿಂದ ಶಕ್ತಿವಾನ್ ಭವ! & ಸದಾ ಅವ್ಯಕ್ತ, ಏಕರಸ ಸ್ಥಿತಿ ಸ್ವರೂಪ ಭವ! ಎಂಬ ವರದಾನಗಳನ್ನು ಸ್ವೀಕರಿಸಿದ್ದೇನೆ.

5. ನಾನು ಕರ್ಮಕ್ಷೇತ್ರದ ವೇದಿಕೆಯ ಮೇಲೆ ಪ್ರತಿಕ್ಷಣ, ಪ್ರತಿಸಂಕಲ್ಪದ ಮೇಲೆ ಗಮನವಿಟ್ಟು ಅಟೆನ್ಶನ್ ಮತ್ತು ಅಕ್ಯೂರೆಸಿಯಿಂದ ಪ್ರತಿಯೊಂದು ಕರ್ಮವನ್ನು ಆಚರಿಸಿ ನನ್ನ ಪ್ರತಿಯೊಂದು ಕರ್ಮದಿಂದ ತಂದೆಯನ್ನು ಪ್ರತ್ಯಕ್ಷ ಮಾಡಿರುವ ಬಾಪ್ ಸಮಾನ ಸ್ವರೂಪ.

6. ನನ್ನ ಪ್ರತಿಯೊಂದು ಕರ್ಮದ ದರ್ಪಣದಿಂದ ತಂದೆಯ ಗುಣಗಳು ಮತ್ತು ಕರ್ತವ್ಯದ ದಿವ್ಯ ರೂಪ ಮತ್ತು ಆತ್ಮೀಯತೆಯ ಸಾಕ್ಷಾತ್ಕಾರವಾಗುತ್ತಿದೆ.

7. ನಾನು ಕೇವಲ ಸಂಕಲ್ಪಗಳನ್ನಲ್ಲದೇ ದೇಹಾಭಿಮಾನವನ್ನು ಕೂಡ ಅರ್ಪಣೆ ಮಾಡಿದ್ದೇನೆ.

8. ನಾನು ದೇಹಾಭಿಮಾನವನ್ನು ಅರ್ಪಣೆ ಮಾಡಿ ನನ್ನದು ಎಂಬ ಭಾವನೆಯನ್ನು ಮತ್ತು ಸೆಳೆತವನ್ನು ಸಮಾಪ್ತಿ ಮಾಡಿದ್ದೇನೆ.

9. ನಾನು ಸದಾ ಯೋಗಯುಕ್ತವಾಗಿ ಸರ್ವ ಬಂಧನಮುಕ್ತವಾಗಿ ಸಮರ್ಪಣೆಯಾಗಿದ್ದೇನೆ.

10. ನಾನು ಪರಮಾತ್ಮನಿಂದ, ಸ್ವಯಂನಿಂದ ಲಭಿಸುವ ಸರ್ಟಿಫಿಕೇಟ್, ಸರ್ವರನ್ನು ಸಂತುಷ್ಟ ಮಾಡಿರುವ ಸರ್ಟಿಫಿಕೇಟ್, ಸಂಪೂರ್ಣ ಸಮರ್ಪಣೆಯ ಸರ್ಟಿಫಿಕೇಟ್, ಜ್ಞಾನ ಯುಕ್ತಿಗಳನ್ನು ಸಂಗ್ರಹಿಸಿಕೊಳ್ಳುವ ಸರ್ಟಿಫಿಕೇಟನ್ನು ಪಡೆದಿದ್ದೇನೆ.

11. ನಾನು ನಮ್ರಚಿತ್ತತೆಯಿಂದ ಸ್ವ ಪರಿವರ್ತನೆಯಾಗಬೇಕು ಎಂಬ ಇಚ್ಛೆಯನ್ನು ಪೂರ್ತಿ ಮಾಡಿಕೊಂಡಿದ್ದೇನೆ.

12. ನಾನು ಉದಾಹರಣಾಮೂರ್ತಿ ಮತ್ತು ಸುಪುತ್ರನಾಗಿದ್ದೇನೆ.

13. ವಿಶ್ವದಲ್ಲಿರುವ ಆತ್ಮರೆಲ್ಲರೂ ನನ್ನ ಪ್ರತಿಜ್ಞೆಯನ್ನು ತೊಲಗಿಸುವ ಪ್ರಯತ್ನ ಮಾಡಿದಾಗಲೂ ಪ್ರತಿಜ್ಞೆಯಿಂದ ತೊಲಗದೆ ಎದುರಿಸಿ ಸಂಪೂರ್ಣವಾಗಿ ತಯಾರಾಗಿದ್ದೇನೆ.

14. ನಾನು ಈ ವಿಶ್ವದಿಂದ ಆರಿಸಲ್ಪಟ್ಟಂತಹ ವಿಶೇಷ ಆತ್ಮನಾಗಿದ್ದೇನೆ.

15. ನನ್ನ ಗುರಿ "ಕಡಿಮೆ ಹೇಳುವುದು ಮತ್ತು ಜಾಸ್ತಿ ಮಾಡಿ ತೋರಿಸುವುದು".

16. ನಾನು ವೇದಿಕೆಯ ಮೇಲೆ ಪಾತ್ರವನ್ನು ಹೇಗೆ ಅಭಿನಯಿಸುತ್ತಿದ್ದೇನೆ ಎಂದರೆ ಎಲ್ಲರೂ ವನ್ಸ್ ಮೋರ್ (ಮತ್ತೊಮ್ಮೆ) ಎಂದು ಹೇಳುತ್ತಿದ್ದಾರೆ.